# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **05** |
| **ಉತ್ತರಿಸಬೇಕಾದ ದಿನಾಂಕ** | : | **04–03–2025** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಸಾಲ ನೀಡಲು ಸಹಕಾರಿ ಸಂಸ್ಥೆಗಳಿಗೆ ನೀಡಲಾದ ಮೊತ್ತವೆಷ್ಟು; ಸದರಿ ಮೊತ್ತದ ಮರುಪಾವತಿ ಕುರಿತು ಕೈಗೊಂಡ ಕ್ರಮಗಳೇನು;</td><td>ಕಳೆದ ಮೂರು ವರ್ಷಗಳಲ್ಲಿ ರೈತರಿಗೆ ಸಾಲ ನೀಡಲು ಸರ್ಕಾರದಿಂದ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ ಮಾತ್ರ ಸಾಲದ ರೂಪದಲ್ಲಿ ಗರಿಷ್ಟ 5 ವರ್ಷದ ಅವಧಿಯಲ್ಲಿ ಮರುಪಾವತಿಸಲು ಅನುದಾನವನ್ನು ಒದಗಿಸಿದ್ದು, ವರ್ಷವಾರು ನೀಡಿದ ಮೊತ್ತದ ವಿವರವನ್ನು ಈ ಕೆಳಗೆ ಸಲ್ಲಿಸಿದೆ.<br><br>(ರೂ.ಕೋಟಿಗಳಲ್ಲಿ)<br>
<table>
<tr><th>ಕ್ರ.ಸಂ.</th><th>ವರ್ಷ</th><th>ಮೊತ್ತ</th></tr>
<tr><td>1</td><td>2021-22</td><td>10.00</td></tr>
<tr><td>2</td><td>2022-23</td><td>15.00</td></tr>
<tr><td>3</td><td>2023-24</td><td>15.00</td></tr>
<tr><td>4</td><td>2024-25</td><td>16.00</td></tr>
</table>
<br>ಉಳಿದಂತೆ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಸಾಲ ನೀಡಲು ನಬಾರ್ಡ್, ಅಪೆಕ್ಸ್ ಬ್ಯಾಂಕ್ ಮತ್ತು ಡಿಸಿಸಿ ಬ್ಯಾಂಕುಗಳು ಹಾಗೂ ತಮ್ಮ ಸ್ವಂತ ಬಂಡವಾಳವನ್ನು ಉಪಯೋಗಿಸಿಕೊಳ್ಳುತ್ತವೆ.<br><br>ಕಸ್ಕಾರ್ಡ್ ಬ್ಯಾಂಕಿಗೆ ರಾಜ್ಯ ಸರ್ಕಾರವು ನೀಡಿದ ಸಾಲದ ಕಂತುಗಳು 5 ವರ್ಷ ಅವಧಿಯದ್ದಾಗಿದ್ದು, 2021-22ನೇ ಸಾಲಿನಲ್ಲಿ ನೀಡಿದ ನೇರ ಸಾಲ ವಂತಿಕೆಯ ಮೊತ್ತ ರೂ.10.00 ಕೋಟಿಗಳಲ್ಲಿ</td></tr>
</table>

| | | |
|---|---|---|
| | | ಇಲ್ಲಿಯವರೆಗೆ ರೂ.6.00 ಕೋಟಿಗಳನ್ನು, 2022-23 ನೇ ಸಾಲಿನಲ್ಲಿ ನೀಡಿದ ನೇರ ಸಾಲ ವಂತಿಕೆಯ ಮೊತ್ತ ರೂ.10.00 ಕೋಟಿಗಳಲ್ಲಿ ಇಲ್ಲಿಯವರೆಗೆ ರೂ.7.50 ಕೋಟಿಗಳನ್ನು ಹಾಗೂ 2023-24 ನೇ ಸಾಲಿನಲ್ಲಿ ನೀಡಿದ ನೇರ ಸಾಲ ವಂತಿಕೆಯ ಮೊತ್ತ ರೂ.15.00 ಕೋಟಿಗಳಲ್ಲಿ ಇಲ್ಲಿಯವರೆಗೆ ರೂ.2.25 ಕೋಟಿಗಳನ್ನು ಕಸ್ಕಾರ್ಡ್ ಬ್ಯಾಂಕ್ ನಿಗದಿತ ಅವಧಿಯಲ್ಲಿ ಕಂತುಗಳನ್ನು ಸರ್ಕಾರಕ್ಕೆ ಮರುಪಾವತಿಸಿದ್ದು, ಯಾವುದೇ ಸುಸ್ತಿ ಬಾಕಿ ಉಳಿಸಿಕೊಂಡಿರುವುದಿಲ್ಲ. ಉಳಿದ ಕಂತುಗಳನ್ನು ಮರುಪಾವತಿಸಲು ಗಡುವು ಇದ್ದು, ಬ್ಯಾಂಕು ಸಕಾಲಕ್ಕೆ ಸಾಲ ಮರುಪಾವತಿಸಲು ಕ್ರಮವಹಿಸಿರುತ್ತದೆ. |
| ಆ) | ಸರ್ಕಾರವು ಸಹಕಾರ ಇಲಾಖೆಯ ಮೂಲಕ ನೀಡಿದ ಸಹಾಯಧವನ್ನು ಸಹಕಾರಿ ಸಂಸ್ಥೆಗಳು ಯಾವ ಯಾವ ಬಾಬ್ತುಗಳಿಗೆ ವೆಚ್ಚ ಮಾಡಬಹುದು; (ಸಹಕಾರಿ ಸಂಸ್ಥೆಗಳ ಹೆಸರಿನೊಂದಿಗೆ ಮಾಹಿತಿ ನೀಡುವುದು). | ರಾಜ್ಯ ಸರ್ಕಾರವು ನೇರ ಸಾಲ ವಂತಿಕೆಯ ಯೋಜನೆಯಡಿ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ ಮಾತ್ರ ಸಾಲದ ರೂಪದಲ್ಲಿ ನೀಡಿದ ಮೊತ್ತವನ್ನು ಬ್ಯಾಂಕಿನ ಸದಸ್ಯ ಬ್ಯಾಂಕುಗಳಾದ ಪಿಕಾರ್ಡ್ ಬ್ಯಾಂಕುಗಳ ಮೂಲಕ ರಾಜ್ಯದ ರೈತರಿಗೆ ನಬಾರ್ಡ್ ಸೂಚಿತ ದೀರ್ಘಾವಧಿ ಕೃಷಿ ಮತ್ತು ಕೃಷಿ ಪೂರಕ ಯೋಜನೆಗಳಡಿ ಸಾಲ ವಿತರಿಸಲಾಗುತ್ತಿದೆ. |
| ಇ) | ಕಳೆದ 3 ವರ್ಷಗಳಲ್ಲಿ ಯಾವ ಯಾವ ಸಹಕಾರಿ ಸಂಸ್ಥೆಗಳಿಗೆ ಸಹಾಯಧನವನ್ನು ನೀಡಲಾಗಿದೆ: ಎಷ್ಟು ಮೊತ್ತದ ಸಹಾಯಧನವನ್ನು ನೀಡಲಾಗಿದೆ? (ಸಹಕಾರಿ ಸಂಸ್ಥೆಯ ಹೆಸರಿನೊಂದಿಗೆ ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ 10 ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ರೂ.300.00 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ.<br><br>ಈ ಸಹಾಯಧನವನ್ನು ಸಂಘಗಳಿಗೆ ತರಬೇತಿ ಕಟ್ಟಡ, ಮಾರಾಟ ಮಳಿಗೆ, ತಡೆಗೋಡೆ, ಗೋದಾಮು ನಿರ್ಮಾಣ ಮತ್ತು ಕಣ ನಿರ್ಮಾಣ, ಶೀಟ್ ಅಳವಡಿಸಲು, ಮಾರಾಟ ಮಳಿಗೆ ನಿರ್ಮಾಣ ಈ ಉದ್ದೇಶಗಳಿಗಾಗಿ ಸಂಘಗಳಿಗೆ ಸಹಾಯಧನವನ್ನು ನೀಡಲಾಗಿದೆ.<br><br>ಸಂಘವಾರು ಪಟ್ಟಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |

**ಸಂಖ್ಯೆ: ಸಿಒ 42 ಸಿಎಲ್ಎಸ್ 2025**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ

**ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಮಾರುಕಟ್ಟೆ ಮೂಲಭೂತ ಸೌಕರ್ಯ ಸ್ಥಾಪನೆ ಯೋಜನೆಯಡಿ ಬಿಡುಗಡೆಯಾದ ಅನುದಾನದ ಲ್ಯಾಂಪ್ಸ್ ಸಹಕಾರ ಸಂಘಗಳ ಪಟ್ಟಿ**

| | | | |
|---|---|---|---|
| **2021–22ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ.** | | | |
| **2022–23** | | | |
| ಕ್ರ.ಸಂ | ಲ್ಯಾಂಪ್ಸ್ ಸಹಕಾರ ಸಂಘದ ಹೆಸರು | ಉದ್ದೇಶ | ಸರ್ಕಾರದಿಂದ ಬಿಡುಗಡೆ ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
| 1. | ಕರ್ನಾಟಕ ರಾಜ್ಯ ಲ್ಯಾಂಪ್ಸ್ ಸಹಕಾರ ಸಂಘಗಳ ಮಹಾಮಂಡಳ ನಿ, ಮೈಸೂರು. | ತರಬೇತಿ ಕಟ್ಟಡ | 34.00 |
| 2. | ಲ್ಯಾಂಪ್ಸ್ ಪುತ್ತೂರು | ಮಾರಾಟ ಮಳಿಗೆ ಮತ್ತು ತಡೆಗೋಡೆ ನಿರ್ಮಾಣಕ್ಕಾಗಿ. | 18.00 |
| 3. | ಲ್ಯಾಂಪ್ಸ್ ಸುಳ್ಯ | ಗೋದಾಮು ನಿರ್ಮಾಣ ಮತ್ತು ಮಾರಾಟ ಮಳಿಗೆಗೆ ಶೀಟ್ ಅಳವಡಿಸಲು ಯಂತ್ರೋಪಕರಣ ಖರೀದಿಸಲು | 22.00 |
| 4. | ಲ್ಯಾಂಪ್ಸ್ ಹೆಚ್.ಡಿ.ಕೋಟೆ | ಗೋದಾಮು ನಿರ್ಮಾಣ ಮತ್ತು ಕಣ ನಿರ್ಮಾಣ | 30.00 |
| 5. | ಲ್ಯಾಂಪ್ಸ್ ಬಿ.ಆರ್ ಹಿಲ್ಸ್ | ಗೋದಾಮು ಮತ್ತು ಮಾರಾಟ ಮಳಿಗೆ ನಿರ್ಮಾಣ | 50.00 |
| 6. | ಲ್ಯಾಂಪ್ಸ್, ಚಾಮರಾಜನಗರ | ಗೋದಾಮು ಮತ್ತು ಮಾರಾಟ ಮಳಿಗೆ ನಿರ್ಮಾಣ | 46.00 |
| ಒಟ್ಟು | | | 200.00 |
| **2023–24ನೇ ಸಾಲು** | | | |
| 1. | ಲ್ಯಾಂಪ್ಸ್ ಬೆಳ್ತಂಗಡಿ | ಗೋದಾಮು ಮತ್ತು ಮಾರಾಟ ಮಳಿಗೆ ನಿರ್ಮಾಣಕ್ಕೆ | 20.00 |
| 2. | ಲ್ಯಾಂಪ್ಸ್ ಮಂಗಳೂರು | ಮಾರಾಟ ಮಳಿಗೆ ನಿರ್ಮಾಣಕ್ಕೆ | 30.00 |
| 3. | ಲ್ಯಾಂಪ್ಸ್ ಕೊಪ್ಪ | ಸೀಗೆಪುಡಿ ಮಾಡುವ ಘಟಕದ ಕಟ್ಟಡವನ್ನು ಪೂರ್ಣಗೊಳಿಸಲು | 25.00 |
| 4. | ಲ್ಯಾಂಪ್ಸ್ ಬಸವನಹಳ್ಳಿ | ವ್ಯಾಪಾರ ಮಳಿಗೆ ನಿರ್ಮಾಣ ಮಾಡಲು | 25.00 |
| **ಒಟ್ಟು** | | | 100.00 |

(ಲಕ್ಷ್ಮೀಪತಯ್ಯ)
ಸಹಕಾರ ಸಂಘಗಳ ಅಪರ ನಿಬಂಧಕರು
(ವಸತಿ ಮತ್ತು ಇತರೆ)